ಇ) 1991-92ನೇ ಶೈಕ್ಷಣಿಕ ಸಾಲಿನಲ್ಲಿ ಜಿಲ್ಲಾಪರಿಷತ್ತು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವ ಸರ್ಕಾರಿ ಮತ್ತು ಖಾಸಗಿ ಶಾಲೆಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಸರ್ಕಾರ ಎಷ್ಟಕ್ಕೆ ಅನುಮತಿ ನೀಡಿದೆ? (ಜಿಲ್ಲಾವಾರು ಮತ್ತು ಆಯಾ ಜಿಲ್ಲೆಯ ತಾಲ್ಲೂಕುವಾರು ಮಾಹಿತಿಯನ್ನೊದಗಿಸುವುದು)

ಈ) ಸರ್ಕಾರದ ಅನುಮತಿ ಪಡೆಯದೆ ಯಾವ ಯಾವ ಜಿಲ್ಲಾಪರಿಷತ್ತಿನವರು ಸರ್ಕಾರದ ವತಿಯಿಂದ ಮತ್ತು ಖಾಸಗಿ ಸಂಸ್ಥೆಗಳಿಗೆ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡಿದೆ? ಜಿಲ್ಲಾಪರಿಷತ್ತಿನ ಈ ನಿಲುವಿಗೆ ಸರ್ಕಾರದ ಧೋರಣೆ ಏನು ತಿಳಿಸುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):-

ಅ)

ಸರ್ಕಾರಿ	ಖಾಸಗಿ	ಒಟ್ಟು
276	1145	1421

(ಜಿಲ್ಲಾವಾರು ಅಂಕಿ ಸಂಖ್ಯೆಯನ್ನು ಆನಂತರ ಒದಗಿಸಲಾಗುವುದು)

ಆ) ಸರ್ಕಾರಿ ಪತ್ರ ಸಂಖ್ಯೆ ಇಡಿ 58 ಯೋಪ್ರೌಶಾ 88 ದಿ: 25-6-1988ರಲ್ಲಿ ಅಧಿಕಾರವನ್ನು ಹಿಂತೆಗೆದುಕೊಂಡಿದೆ.

(ವರ್ಷಾವಾರು ಮತ್ತು ಜಿಲ್ಲಾವಾರು ಪಟ್ಟಿಯನ್ನು ಆನಂತರ ಒದಗಿಸಲಾಗುವುದು)

ಇ) ಜಿಲ್ಲಾಪರಿಷತ್ ಶಿಫಾರಸ್ಸು ಮಾಡಿರುವುದು

ಸರ್ಕಾರಿ	ಖಾಸಗಿ	ಒಟ್ಟು
126	374	500

ಸರ್ಕಾರದ ಮಂಜೂರಾತಿ

120	215	335

(ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿಯನ್ನು ನಂತರ ಒದಗಿಸಲಾಗುವುದು)

ಈ) ಮೈಸೂರು ಜಿಲ್ಲೆ - 02

ಧಾರವಾಡ ಜಿಲ್ಲೆ - 155

ಸರ್ಕಾರದ ಪೂರ್ವಾನುಮತಿ ಪಡೆಯದೆ ಖಾಸಗಿ ಪ್ರೌಢಶಾಲೆಗಳಿಗೆ ಅನುಮತಿ ನೀಡಿರುವ ಜಿಲ್ಲಾಪರಿಷತ್ತಿನ ಕ್ರಮ ಸರಿಯಲ್ಲ, ಆದರೂ ಆ ಶಿಕ್ಷಣ ಸಂಸ್ಥೆಗಳ ಅರ್ಹತೆ ಮತ್ತು ಆ ಸ್ಥಳಗಳಲ್ಲಿ ಶಾಲೆಯ ಅವಶ್ಯಕತೆ ಬಗ್ಗೆ ಪರಿಶೀಲಿಸಿ ಸದರಿ ಸಂಸ್ಥೆಗಳು ಅನುದಾನ ಸಂಹಿತೆಯ ನಿಯಮಗಳಲ್ಲಿನ ಅವಶ್ಯಕತೆಗಳನ್ನು ಪೂರೈಸಿದಲ್ಲಿ ಆ ಸಂಸ್ಥೆಗಳಿಗೆ ಪ್ರೌಢಶಾಲೆ ತೆರೆಯಲು ಅನುಮತಿ ನೀಡುವ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು.

ಬಿಜಾಪುರದಲ್ಲಿ ಮುನ್ಸಿಫ್ ಅಡಿಷನಲ್ ನ್ಯಾಯಾಲಯ ಸ್ಥಾಪನೆ

432(614). ಶ್ರೀ ಮನೋಹರ ಐನಾಪುರ (ಬೆಳೊಳ್ಳಿ):- ಮಾನ್ಯ ಕಾನೂನು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಬಿಜಾಪುರದಲ್ಲಿ ಅಧಿಕ ಮುನ್ಸಿಫ್ ನ್ಯಾಯಾಲಯ ಸ್ಥಾಪಿಸಲು ಮನವಿಯನ್ನು ಸ್ವೀಕರಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರವು ಮಂಜೂರಾತಿ ನೀಡಲು ಉದ್ದೇಶಿಸಿದೆಯೇ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾನೂನು ಸಚಿವರು):-

ಅ) ಹೌದು.

ಅ) ಇದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಮೂರ್ತೆದಾರರ ಸಹಕಾರ ಸಂಘಗಳ ನೊಂದಾವಣಿ

433(616). ಶ್ರೀ ವಸಂತ ವಿ. ಸಾಲಿಯಾನ (ಕಾಪು):- ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂರ್ತೆದಾರರ ಎಷ್ಟು ಸಹಕಾರ ಸಂಘಗಳನ್ನು ನೊಂದಾಯಿಸಲಾಗಿದೆ?

ಆ) ಈ ಸಂಘಗಳಿಗೆ ಸರ್ಕಾರದಿಂದ ನೀಡಲಾದ ಸವಲತ್ತುಗಳು ಯಾವುವು?

ಇ) ಮೂರ್ತೆದಾರರ ಭವಿಷ್ಯಕ್ಕಾಗಿ ಸರ್ಕಾರವು ರೂಪಿಸಿರತಕ್ಕ ಯೋಜನೆಗಳಾವುವು?

ಶ್ರೀ ಎಸ್.ಆರ್. ಮೋರೆ (ಸಹಕಾರ ಸಚಿವರು)

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈವರೆಗೆ 32 ಮೂರ್ತೆದಾರರ ಸಹಕಾರ ಸಂಘಗಳನ್ನು ನೊಂದಾಯಿಸಲಾಗಿದೆ.

ಆ) ಈ ಸಂಘಗಳಿಗೆ ಇಲ್ಲಿಯವರೆಗೂ ಸರ್ಕಾರದಿಂದ ಯಾವ ಧನ ಸಹಾಯವನ್ನು ನೀಡಿರುವುದಿಲ್ಲ, ಆದರೆ ಸರ್ಕಾರದ ವತಿಯಿಂದ ಇತರೇ ಎಲ್ಲಾ ಆಡಳಿತಾತ್ಮಕ ನೆರವನ್ನು ನೀಡಿರುತ್ತದೆ.

ಇ) ಈ ಸಂಘಗಳು ಜಿಲ್ಲೆಯ ಮೂರ್ತೆದಾರರ ಹಿತದೃಷ್ಟಿಯಿಂದ ಮಾತ್ರ ಸ್ಥಾಪಿಸಲ್ಪಟ್ಟಿದ್ದು, ಶೇಂದಿಯನ್ನು ಸಂಗ್ರಹಿಸುವುದು ಮತ್ತು ಮಾರಾಟ ಮಾಡುವುದು ಹಾಗೂ ಪೆನ್ನಿ ಕಾರ್ಖಾನೆಗಳಿಗೆ ಬೇಕಾಗುವ ಶೇಂದಿಯನ್ನು ಈ ಸಂಘಗಳ ಮೂಲಕವೇ ಪಡೆಯಲು ಕಟ್ಟು ನಿಟ್ಟಾದ ಆಜ್ಞೆಯನ್ನು ಕರ್ನಾಟಕ ಎಕ್ಸೈಜ್ (ಟಾಪಿಂಗ್ ಆಫ್ ಟ್ರೀ) ನಿಯಮ 1991ರ ಅಡಿಯಲ್ಲಿ ರೂಪಿಸಲಾಗಿದೆ.

ಬೆಂಗಳೂರು ನಗರ ಸಾರಿಗೆಯ ಬಸ್ಸುಗಳಲ್ಲಿ ಪ್ರಯಾಣ ಮಾಡುತ್ತಿರುವ ವೃದ್ಧರಿಗೆ ನೀಡಲಾದ ರಿಯಾಯಿತಿ

434(630).ಶ್ರೀ ರಾಮಲಿಂಗ ರೆಡ್ಡಿ (ಜಯನಗರ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಬೆಂಗಳೂರು ನಗರ ಸಾರಿಗೆಯ ಬಸ್ಸುಗಳಲ್ಲಿ ಪ್ರಯಾಣ ಮಾಡುತ್ತಿರುವ ವೃದ್ಧರಿಗೆ ನೀಡಲಾಗಿದ್ದ ರಿಯಾಯಿತಿಯನ್ನು ಸರ್ಕಾರವು ಹಿಂದಕ್ಕೆ ಪಡೆದಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಅದನ್ನು ಹಿಂದಕ್ಕೆ ಪಡೆಯಲಾಯಿತು?

ಇ) ಈ ರಿಯಾಯಿತಿ ಪಾಸುಗಳನ್ನು ಎಷ್ಟು ಮಂದಿ ವಯೋವೃದ್ಧರಿಗೆ ನೀಡಲಾಗಿತ್ತು?

ಈ) ಇದನ್ನು ಹಿಂದಕ್ಕೆ ಪಡೆಯಲು ಕಾರಣಗಳೇನು?

ಉ) ಈ ರಿಯಾಯಿತಿಯಿಂದಾಗುವ (ವಾರ್ಷಿಕ) ಖರ್ಚೆಷ್ಟು?

ಊ) ವಯೋವೃದ್ಧರಿಗೆ ವಿಶ್ವಾದ್ಯಂತ ಅನೇಕ ಸೌಲಭ್ಯಗಳನ್ನು ಒದಗಿಸಿರುವುದು ಸರ್ಕಾರಕ್ಕೆ ತಿಳಿದಿದೆಯೇ?

ಋ) ವಿಶ್ವಸಂಸ್ಥೆಯ ನಿರ್ಣಯದ ಪ್ರಕಾರ ಬೆಂಗಳೂರು ನಗರ ಸಾರಿಗೆ ಬಸ್‌ಗಳಲ್ಲಿ ಅರ್ಧ ಬಸ್ ಪ್ರಯಾಣ ದರದ ರಿಯಾಯಿತಿಯನ್ನು ವಯೋವೃದ್ಧರಿಗೆ ಸರ್ಕಾರವು ಪೂರ್ವಸ್ಥಿತಿಗೆ ತರುವುದೇ?

ಶ್ರೀ ಆಜೀಜ್ ಸೇಠ್ (ಸಾರಿಗೆ ಸಚಿವರು):-

ಅ) ಹೌದು.

ಆ) ಈ ರಿಯಾಯಿತಿಯನ್ನು ದಿನಾಂಕ 14-1-1992 ರಿಂದ ಹಿಂದಕ್ಕೆ ಪಡೆಯಲಾಯಿತು.